

# ಪೈಪ್ ನೆಕ್ಲೇಸ್

**ನೆಕ್ಲೇಸ್‌ನೊಳಗೆ ಪೈಪ್. ಇದು ಆಭರಣ ಪ್ರಪಂಚದಲ್ಲಿ ಹೊಸ ಆವಿಷ್ಕಾರ. ಕಡಿಮೆ ಖರ್ಚಿನಲ್ಲಿ ಸಿಗುವ ಈ ನೆಕ್ಲೇಸ್ ಫ್ಯಾಷನಬಲ್ ಆಗಿಯೂ ಕಾಣುತ್ತದೆ.**

■ ಕೃಷ್ಣವೇಣಿ ಪ್ರಸಾದ್ ಮುಳಿಯ

ಹೆಸರಲ್ಲೇನಿದೆ! ಈ ಆಭರಣದಲ್ಲಿ ಇದೆ. ಹೆಸರೇ ಹೇಳುವಂತೆ 'ಪೈಪ್ ನೆಕ್ಲೇಸ್' ಒಳಗೆ ಒಂದು ಪೈಪ್ ಅಳವಡಿಸಲಾಗಿದೆ. ಕಡಿಮೆ ಚಿನ್ನದಲ್ಲಿ ಬಳೆ ಮಾಡಬೇಕಿದ್ದರೆ ಬಳೆಯ ಒಳಭಾಗದಲ್ಲಿ ಪ್ಲಾಸ್ಟಿಕ್, ಪೆಂಡೆಂಟ್ ಮಾಡಬೇಕಿದ್ದರೆ ಪೆಂಡೆಂಟ್‌ನ ಅಡಿಭಾಗದಲ್ಲಿ ಪ್ಲೇಟ್ ಅಳವಡಿಸಿ ಭದ್ರ ಮಾಡುವುದು ಹಿಂದಿನಿಂದಲೂ ಬಳಕೆಯಲ್ಲಿದೆ. ಮಹಿಳೆಯರಿಗೆ ದೊಡ್ಡ ದೊಡ್ಡ ಆಭರಣ ಹಾಕಬೇಕು ಎಂಬ ಆಸೆ ಸಹಜವಾಗಿ ಇರುತ್ತದೆ. ಕಡಿಮೆ ಗ್ರಾಂನಲ್ಲಿ ಒಡವೆ ಮಾಡಿದಾಗ ಅದು ಜಜ್ಜಿ, ತುಂಡಾಗಿ, ಹಾಳಾಗುವ ಸಂಭವ ಇರುತ್ತದೆ. ಹೀಗಾಗಿಯೇ ಪೈಪ್ ನೆಕ್ಲೇಸ್ ಬಳಕೆ ಈಗೀಗ ಟ್ರೆಂಡ್ ಆಗುತ್ತಿದೆ.

ಇಡೀ ನೆಕ್ಲೇಸನ್ನು ಪೈಪ್‌ನಿಂದ ಮಾಡಿ ಅದರ ಮುಖಾಂತರ ಒಂದಷ್ಟು ಬಂಗಾರದ ಬಣ್ಣದ ನೂಲು ಹಾಕಿ ಮಾಡಬಹುದು. ತಮ್ಮ ತಮ್ಮ ಇಷ್ಟದ ಬಣ್ಣದ ನೂಲು ಅಳವಡಿಸಿ ಚೆನ್ನದ ನೆಕ್ಲೇಸ್ ತಯಾರಿಸಬಹುದು. ಇದನ್ನು ಬೇಕಾದ ಹಾಗೆ ಸೀರೆ, ಡ್ರೆಸ್‌ಗೆ ಮ್ಯಾಚಿಂಗ್ ಮಾಡಬಹುದು. ಏಕೆಂದರೆ ನೂಲು ಸುಲಭದಲ್ಲಿ ಸಿಗುವ ಸಾಧನ. ಅತ್ಯಂತ ಲೈಟ್‌ವೈಟ್ ಆದ ಆಭರಣ ಇದು. ಬಂಗಾರದ ಬಳಕೆ ಬಹಳ ಕಡಿಮೆ. ಬಂಗಾರ ಬಳಸಿದ್ದು ಹೇಗೆ ಎಂದರೆ, ವ್ಯಾಕ್ಸ್ ತುಂಬಿ ಪ್ಲೈನ್ ಬಾಲ್ಸ್ ಪೋಣಿಸಿ ಆಭರಣ ತಯಾರಿಸಲಾಗಿದೆ. ಅದೂ ಮಧ್ಯ ಭಾಗಕ್ಕೆ ಉಳಿದ ಭಾಗಗಳನ್ನು ನೂಲಿನಿಂದ ಆವರಿಸಿದೆ. ಇದರಲ್ಲಿ ಅಡ್ಜಸ್ಟ್ ಮಾಡುವ ಅವಕಾಶ ಇದ್ದು ಕುತ್ತಿಗೆಯ ಅಳತೆಗೆ ತಕ್ಕಂತೆ ಹಾಕಿಕೊಳ್ಳಬಹುದು.

ಇಲ್ಲಿ ಕಪ್ಪಗಿನ ಫೈಬರ್ ಫ್ಲೆಕ್ಸಿಬಲ್ ಮೆಟಲ್ ಬಳಸಲಾಗಿದೆ. ಸೀರೆಗೆ ಒಪ್ಪುವಂತೆ ಯಾವುದೇ ಬಣ್ಣದ ರೇಷ್ಮೆ ನೂಲು ಬಳಸಿ ಜೊತೆಗೆ ನೂಲನ್ನು ಮಿಶ್ರ ಮಾಡಿಯೂ ಬಳಸಬಹುದು. ಗೋಲ್ಡನ್ ಬಣ್ಣದ ನೂಲು, ಸಿಲ್ವರ್ ಬಣ್ಣದ ನೂಲನ್ನು ಜೊತೆಗೂಡಿಸಿ ಹೆಣೆಯಬಹುದು. ಇದರಲ್ಲಿ ಈಗ ಮರೂನ್, ಕಪ್ಪು, ಹಸಿರು, ನೀಲಿ, ಕೆಂಪು ಕಣ್ಣಿಗೆ ಸಹಜವಾಗಿ ಸುಂದರವಾಗಿ ಕಾಣುವ ಬಣ್ಣವನ್ನು ಆರಿಸಿ ಧರಿಸಬಹುದು. ಕೇವಲ 1.5 ಗ್ರಾಂನಿಂದ ಮಾಡಲ್ಪಡುವುದರಿಂದ 2, 3 ನೆಕ್ಲೇಸ್ ಖರೀದಿ ಮಾಡಬಹುದು. ಚೆನ್ನದ ಗುಂಡುಗಳ ಜೊತೆಗೆ ಸಿಂಪಲ್ ಆಗಿ ಬೀಡ್ಸ್, ಕ್ರಿಸ್ಟಲ್ ಬೀಡ್ಸ್, ಹವಳ, ಮುತ್ತುಗಳನ್ನು ಅದೇ ಸೈಜ್‌ನಲ್ಲಿ ಹೊಂದಿಕೊಳ್ಳುವಂತೆ ಪೋಣಿಸಿ ಧರಿಸಬಹುದು.

ಇಂತಹ ನೂಲು, ಫೈಬರ್ ಪೈಪ್ ಇರುವ ಆಭರಣವನ್ನು ನೀರಿನಿಂದ, ಬೆವರಿನಿಂದ ಆದಷ್ಟು ಜಾಗ್ರತೆ ಮಾಡಬೇಕು. ನೂಲು ಹಾಳಾಗುವುದನ್ನು ತಪ್ಪಿಸಲು ಸುಲಭ ಉಪಾಯ ಅಂದರೆ ಆಭರಣ ತೊಳೆಯದಿರುವುದು, ಬೆವರು ತಾಗದಂತೆ ನೋಡಿಕೊಳ್ಳುವುದು, ಆದಷ್ಟು ಆಭರಣ ಒಣಗಿರುವಂತೆ ನೋಡಿಕೊಳ್ಳುವುದು, ಸಿಕ್ಕ ಸಿಕ್ಕಲ್ಲಿ ಹಾಕಬಾರದು, ನೂಲಿನ ತುದಿಯ ಗಂಟು ಸಡಿಲವಾದಾಗ ಗಟ್ಟಿ ಮಾಡಿಕೊಳ್ಳಬೇಕು. ಒಮ್ಮೆ ನೂಲು ಬಿಡಲು ಪ್ರಾರಂಭ ಆದರೆ ಆಭರಣದ ಸ್ವರೂಪ ಕೆಟ್ಟು ಹೋಗುತ್ತದೆ.

ಇಂದು ಮಹಿಳೆಯರು ಮಲ್ಟಿ (ಬಹು) ಕಲರ್ ಆಭರಣಗಳನ್ನು ಹೆಚ್ಚು ಇಷ್ಟಪಡುತ್ತಾರೆ. ಏಕೆಂದರೆ ಸೀರೆಗೆ ಹೊಂದಿಕೊಂಡು (ಪ್ಲೈನ್, ಬಾರ್ಡರ್) ಅದು ಅಂದವಾಗಿ ಕಾಣಬೇಕು. ಮಲ್ಟಿ ಕಲರ್ ಕಣ್ಣಿಗೆ ಆಕರ್ಷಣೆಯನ್ನು ತರುತ್ತದೆ. ಆಭರಣಗಳಲ್ಲಿ ವಿಭಿನ್ನವಾದ ಆಭರಣ ಈ ಪೈಪ್ ನೆಕ್ಲೇಸ್. ಶೋಭೆ, ಸೌಂದರ್ಯವನ್ನು ಹೆಚ್ಚಿಸುವ ಆಭರಣ ಇದು.

ಚೆನ್ನದ ಫಿನಿಶ್, ಕಾಪರ್, ಗೋಲ್ಡ್, ಸಿಲ್ವರ್, ರೋಸ್ ಗೋಲ್ಡಲ್ಲೂ ನೀಡಬಹುದು. ಒಟ್ಟಿನಲ್ಲಿ ಕಡಿಮೆ ಖರ್ಚಿನಲ್ಲಿ ಸುಲಭವಾಗಿ ತಯಾರು ಮಾಡುವ, ಇಂದಿನ ಕಾಲಕ್ಕೆ ಹೊಂದುವ ಆಭರಣ ಇದು. ■